ದಿಃ 23.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಹೆಚ್.ವಿ. ವಕೀಲರಿಂದ ,**

1. ಈ ದಾವೆಯನ್ನು ಯಾರು, ಯಾರ ವಿರುದ್ಧ, ಏನು ಪರಿಹಾರ ಕೋರಿ ಹೂಡಿರುತ್ತಾರೆ ನನಗೆ ತಿಳಿದಿಲ್ಲ. ಈ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನನ್ನನ್ನು 2 ನೇ ಪ್ರತಿವಾದಿ ಕೇಳಿಕೊಂಡಿರುತ್ತಾರೆ. ಆ ರೀತಿ ಆತ ನನ್ನನ್ನು 3 ದಿನಗಳ ಹಿಂದೆ ಕೇಳಿಕೊಂಡಿರುತ್ತಾರೆ. 2 ನೇ ಪ್ರತಿವಾದಿ ಕುಟುಂಬದ ಬಗ್ಗೆ ಹಾಗೂ ಅವರ ಸ್ವತ್ತುಗಳ ಬಗ್ಗೆ ನನಗೆ ತಿಳಿದಿರುತ್ತದೆ.

2. ಮೃತ ನಿಂಗಪ್ಪ ರವರಿಗೆ 6 ಜನ ಮಕ್ಕಳು. ಅವರುಗಳ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ. ಅವರ ಕುಟುಂಬಕ್ಕೆ ಸೇರಿದ ಸ್ವತ್ತುಗಳು ಎಲ್ಲಿ ಎಲ್ಲಿ ಇರುತ್ತವೆ ನನಗೆ ತಿಳಿದಿಲ್ಲ. ಅವುಗಳನ್ನು ನಾನು ನೋಡಿರುವುದಿಲ್ಲ. ಅವರ ಕುಟುಂಬದಲ್ಲಿ ವಿಭಾಗ ಆಗಿದೆಯೇ ಇಲ್ಲವೇ ನನಗೆ ತಿಳಿದಿಲ್ಲ.

3. 2 ನೇ ಪ್ರತಿವಾದಿ ನಮ್ಮ ಊರಿನ ಹುಡುಗಿಯನ್ನು ಮದುವೆ ಆಗಿರುವ ಕಾರಣ ಆತ ನನಗೆ ಪರಿಚಯ ಆಗಿರುತ್ತಾರೆ. ಅದನ್ನು ಹೊರತು ಪಡಿಸಿ ಆತನ ಕುಟುಂಬದ ಸಂಗತಿಗಳು ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಹೆಂಡತಿಯ ಹೆಸರು ಜಯಮ್ಮ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳು ನನಗೆ ತಿಳಿದಿಲ್ಲ. 2 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

<u>**ಮರುವಿಚಾರಣೆ ಇಲ್ಲ.**</u>

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

***(ಟಿ.ಶ್ರೀಕಾಂತ್)***
**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ**